# ಭಲೇ ರಿಷಿ!

■ ಪ್ರವೀಣ ಕುಲಕರ್ಣಿ

ಭಾರತದ, ಅಷ್ಟೇ ಏಕೆ, ಏಷ್ಯಾ ಮೂಲದ ಮೊದಲ ಬ್ರಿಟಿಷ್ ಪ್ರಧಾನಿ, ಎರಡು ಶತಮಾನಗಳಲ್ಲಿಯೇ ಇಂಗ್ಲೆಂಡ್ ಕಂಡ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ, ಶ್ವೇತವರ್ಣೀಯನಲ್ಲದ ಮೊದಲ ಬ್ರಿಟಿಷ್ ಪ್ರಧಾನಿ, ಇಂಗ್ಲೆಂಡ್‌ನ ಮೊದಲ ಹಿಂದೂ ಪ್ರಧಾನಿ... ಹೀಗೆಲ್ಲ ವಿಧ ವಿಧ ದಾಖಲೆ ಬರೆದಿರುವ ರಿಷಿ ಸುನಕ್ ಜಗತ್ತಿನ ಪಾಲಿಗೆ ಹೊಸ ಸೆಲೆಬ್ರಿಟಿ. ಭಾರತೀಯರಂತೂ ಈಗಲೂ ಬೆರಗುಗಣ್ಣಿನಿಂದ ನೋಡುತ್ತಿರುವ ಸಾಧಕ. ಅದರಲ್ಲೂ ಬೆಂಗಳೂರಿನ ಪಾಲಿಗೆ ಇವರು ‘ಸೆಲೆಬ್ರಿಟಿ ಅಳಿಯ’. ಈ ‘ಅಳಿಯ’ ದೀಪಾವಳಿ ಸಂದರ್ಭದಲ್ಲೇ ಪ್ರಧಾನಿ ಪಟ್ಟಕ್ಕೆ ಏರಿರುವುದು ಇನ್ನೂ ವಿಶೇಷ.

ಲಂಡನ್ನಿನ ನಂ. 10, ಡೌನಿಂಗ್ ಸ್ಟ್ರೀಟ್ ವಿಳಾಸವೆಂದರೆ ಅದು ಪ್ರಧಾನಿ ನಿವಾಸವದು. 2020ರ ಫೆಬ್ರುವರಿಯಲ್ಲಿ ಹಣಕಾಸು ಸಚಿವನಾಗುವ ಮೂಲಕ ನಂ. 11, ಡೌನಿಂಗ್ ಸ್ಟ್ರೀಟ್ ವಿಳಾಸದ ನಿವಾಸಿಯಾಗಿದ್ದ ಸುನಕ್, ಪ್ರಧಾನಿ ಹುದ್ದೆಗೆ ಹತ್ತಿರವಾದ ಸೂಚನೆಯನ್ನು ಆಗಲೇ ನೀಡಿದ್ದರು. ಅಂದಹಾಗೆ, ಹಣಕಾಸು ಸಚಿವನಾಗಿ ಅವರು ಪ್ರಮಾಣವಚನ ಸ್ವೀಕರಿಸಿದ್ದು ಭಗವದ್ಗೀತೆಯ ಮೇಲೆ. ಈಗ ನಂ. 10, ಡೌನಿಂಗ್ ಸ್ಟ್ರೀಟ್ ನಿವಾಸಿಯಾಗಿ ಆ ದೇಶವನ್ನು ಉದ್ದೇಶಿಸಿ ಭರವಸೆಯ ಮಾತುಗಳನ್ನಾಡಿದ್ದಾರೆ.

ಹಾಗೆ ನೋಡಿದರೆ ಸುನಕ್ ಎಲ್ಲ ಅರ್ಥದಲ್ಲೂ ಸಾಂಪ್ರದಾಯಿಕ ಬ್ರಿಟಿಷ್ ಪ್ರಧಾನಿ. ಓದಿದ್ದು ವಿಂಚೆಸ್ಟರ್ ಕಾಲೇಜಿನಲ್ಲಿ. ಅಲ್ಲಿಂದ ಲಿಂಕನ್ ಕಾಲೇಜು ಮತ್ತು ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ. ಫಿಲಾಸಫಿ, ಪಾಲಿಟಿಕ್ಸ್ ಆ್ಯಂಡ್ ಎಕನಾಮಿಕ್ಸ್ (ಪಿಪಿಇ) ಪದವಿ ಪಡೆದ ಸುನಕ್‌ಗೆ ಫುಟ್‌ಬಾಲ್ ಕ್ರೀಡೆ ಅಂದರೆ ಪಂಚಪ್ರಾಣ. ಶಾಲಾ ದಿನಗಳಲ್ಲಿ ಯುರೋಕಪ್ ಫುಟ್‌ಬಾಲ್ ಪಂದ್ಯಗಳು ‘ಮಿಸ್’ ಆಗಬಾರದು ಎಂದು ಶಾಲೆಗೆ ಹ್ಯಾಂಡ್ ಟಿ.ವಿಯನ್ನು ತಂದು ಕದ್ದುಮುಚ್ಚಿ ನೋಡುವಷ್ಟು ಆ ಕ್ರೀಡೆಯ ಮೇಲೆ ಪ್ರೀತಿ. ಸುನಕ್, ತಮ್ಮ ಅತ್ಯಂತ ನೆಚ್ಚಿನ ಸೌತಾಂಪ್ಟನ್ ತಂಡದ ಎಲ್ಲ ಆಟಗಾರರ ಸಹಿಯುಳ್ಳ ಕಾರ್ಡ್‌ಅನ್ನು ತಮ್ಮ 18ನೇ ಜನ್ಮದಿನಕ್ಕೆ ಕಾಣಿಕೆಯಾಗಿ ಪಡೆದಿದ್ದರಂತೆ. ಅದು ಇನ್ನೂ ಅವರ ಮನೆಯ ಹೆಮ್ಮೆಯ ಸಂಗ್ರಹಗಳಲ್ಲಿ ಒಂದಾಗಿದೆ.

ಇಂಗ್ಲೆಂಡ್‌ನ ಅತ್ಯಂತ ಸಿರಿವಂತ ಪ್ರಧಾನಿ ಎಂಬ ವಿಶೇಷಣವೂ ಸುನಕ್ ಅವರಿಗೆ ಸೇರಿಕೊಂಡಿದೆ. ಇಂಗ್ಲೆಂಡ್ ರಾಜನಿಗಿಂತ ಎರಡು ಪಟ್ಟು ಅಧಿಕ ಸಂಪತ್ತನ್ನು ಹೊಂದಿದ ಸುನಕ್, ಪ್ರಧಾನಿ ಹುದ್ದೆಗೇರದಷ್ಟು ಸಿರಿವಂತ ಎಂದು ವಿರೋಧಿಗಳು ಕುಹಕವಾಡಿದ್ದೂ ಇದೆ. ಸುನಕ್ ಅವರ ಪತ್ನಿ ಅಕ್ಷತಾ, ಇನ್ಫೋಸಿಸ್‌ನ ಸ್ಥಾಪಕರಲ್ಲಿ ಒಬ್ಬರಾದ ನಾರಾಯಣಮೂರ್ತಿ ಮತ್ತು ಸುಧಾ ಮೂರ್ತಿ ಅವರ ಪುತ್ರಿ. ಇನ್ಫೋಸಿಸ್‌ನಲ್ಲಿ ಅಕ್ಷತಾ ಹೊಂದಿರುವ ಪಾಲು ಅವರನ್ನು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರನ್ನಾಗಿ ಪರಿಗಣಿಸುವಂತಾಗಿದೆ. ಅಕ್ಷತಾ ಅವರ ಷೇರುಗಳ ಮೇಲೆ ಅವರಿಗೆ ಈಚೆಗೆ ಬಂದ ಲಾಭಾಂಶದ ಪ್ರಮಾಣವೇ ₹ 120 ಕೋಟಿಗಿಂತ ಹೆಚ್ಚಿದೆ.



ಸುನಕ್ ಅವರ ತಂದೆ–ತಾಯಿ ಭಾರತದಿಂದ ವಲಸೆ ಹೋದವರು. ಕೆಲಕಾಲ ಪೂರ್ವ ಆಫ್ರಿಕಾದಲ್ಲಿದ್ದ ಅವರು ಕೊನೆಗೆ ಇಂಗ್ಲೆಂಡ್‌ನಲ್ಲಿ ನೆಲೆ ಕಂಡುಕೊಂಡರು. ಅವರ ತಂದೆ ವೈದ್ಯರಾದರೆ, ತಾಯಿ ಫಾರ್ಮಸಿ ನಡೆಸುತ್ತಿದ್ದರು. ಅಂದಹಾಗೆ, ಅಕ್ಷತಾ ಅವರನ್ನು ಸುನಕ್ ಭೇಟಿಯಾಗಿದ್ದು ಅಮೆರಿಕದ ಸ್ಟ್ಯಾನ್‌ಫರ್ಡ್ ಬ್ಯುಸಿನೆಸ್ ಸ್ಕೂಲ್‌ನಲ್ಲಿ; ಎಂಬಿಎ ಓದಲು ಹೋದಾಗ. ಸುನಕ್–ಅಕ್ಷತಾ ಅವರ ಮದುವೆಯಾಗಿದ್ದು ನಮ್ಮ ಬೆಂಗಳೂರಿನಲ್ಲಿ. ಬಸವನಗುಡಿಯ ವಿದ್ಯಾರ್ಥಿಭವನದಲ್ಲಿ ಅವರು ದೋಸೆ ಸವಿದ ಫೋಟೊಗಳು ಈಗ ಎಲ್ಲೆಡೆ ಹರಿದಾಡುತ್ತಿವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದ ಸುನಕ್, 2014ರಲ್ಲಿ ಆ ಕ್ಷೇತ್ರವನ್ನು ತೊರೆದು ರಾಜಕೀಯದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದರು. ಯಾರ್ಕ್‌ಶೈರ್‌ನ ರಿಚ್ಮಂಡ್ ಕ್ಷೇತ್ರದಿಂದ ನಿರಾಯಾಸವಾಗಿ ಗೆದ್ದು ಬಂದರು. ಅಲ್ಲಿಂದ ಹಿಂದಿರುಗಿ ನೋಡಿದ್ದೇ ಇಲ್ಲ. ಎಂಟೇ ವರ್ಷಗಳಲ್ಲಿ ಪ್ರಧಾನಿ ಹುದ್ದೆಗೆ ಏರುವ ಮಟ್ಟಕ್ಕೆ ಅವರು ಬೆಳೆದಿದ್ದು ರೋಚಕ ಕಥನ.

ಸುನಕ್ ಅವರ ಕಾರ್ಯವೈಖರಿಯನ್ನು ಇಂಗ್ಲೆಂಡ್‌ನ ಎಲ್ಲ ಸರ್ಕಾರಿ ಅಧಿಕಾರಿಗಳೂ ಹಾಡಿಹೊಗಳಿದ್ದಾರೆ. ಅರ್ಥವ್ಯವಸ್ಥೆಯ ಚಲನೆ ಕುರಿತು ಅವರಿಗೆ ಆಳವಾದ ಜ್ಞಾನವಿದೆ ಎಂದು ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿದ್ದ ಟಾಮ್ ಸ್ಕಾಲರ್ ಕೊಂಡಾಡಿದ್ದಾರೆ. ಹೊಸ ತಲೆಮಾರಿನ ನಾಯಕನಾಗಿರುವ ಅವರೊಬ್ಬ ಟೆಕ್ನೊಕ್ರಾಟ್ ಕೂಡ ಹೌದು. ಬ್ರೆಕ್ಸಿಟ್ ಪರವಾಗಿ ದೊಡ್ಡದಾಗಿ ಧ್ವನಿ ಎತ್ತಿದ ನಾಯಕನೂ ಅವರಾಗಿದ್ದರು. ಆಡಳಿತ ಸುಸೂತ್ರವಾಗಿ ನಡೆಯಲು ರಾಜ್ಯಗಳ ಗಾತ್ರ ಚಿಕ್ಕದಾಗಿದ್ದಷ್ಟೂ ಒಳ್ಳೆಯದು, ಜನರಿಗೆ ಹೊರೆಯಾಗದಂತೆ ನೋಡಿಕೊಳ್ಳಲು ತೆರಿಗೆ ಕಡಿತ ಮಾಡುವುದು ಅಪೇಕ್ಷಣೀಯ ಎನ್ನುವುದು ಅವರ ಪ್ರಬಲ ನಂಬಿಕೆ.

ಹಿಂದೆ ತಾನಾಳಿದ ದೇಶಕ್ಕೆ ಸೇರಿದ ವ್ಯಕ್ತಿಗೇ ಇಂಗ್ಲೆಂಡ್ ಈಗ ತನ್ನನ್ನು ಆಳಲು ಸಮರ್ಪಿಸಿಕೊಂಡಿದೆ ಎಂಬ ಮಾತು ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸದ್ದು ಮಾಡಿದೆ. ಹಾಗೆ ನೋಡಿದರೆ, ಸುನಕ್ ಕೆಲವು ವಾರಗಳ ಹಿಂದೆಯೇ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಬೇಕಿತ್ತು. ಆದರೆ, ಲಿಜ್ ಟ್ರಾಸ್, ಅವರು ಪ್ರಧಾನಿ ಪಟ್ಟಕ್ಕೆ ಏರುವುದನ್ನು ಕೆಲವು ವಾರ ತಡೆದರಷ್ಟೆ. ಪ್ರಧಾನಿಯಾದ ಸಂಭ್ರಮದಲ್ಲಿ ಸುನಕ್ ತೇಲುವ ಹಾಗಿಲ್ಲ. ಏಕೆಂದರೆ, ಇಂಗ್ಲೆಂಡ್‌ನ ಅರ್ಥವ್ಯವಸ್ಥೆ ವೈಫಲ್ಯದ ಸುಳಿಯಲ್ಲಿ ಸದ್ಯ ಮುಳುಗುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65